C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.39/2021

ದಿನಾಂಕಃ 04.07.2022 ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:3 ಪಿ. ಡಬ್ಲ್ಯೂ:4

| | |
|---|---|
| ಸಾಕ್ಷಿದಾರರ ಹೆಸರು | ರಾಘು |
| ತಂದೆಯ ಹೆಸರು | ತಿಮ್ಮೇಗೌಡ |
| ವಯಸ್ಸು | 41 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸ | ಮಂಡ್ಯ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ನನ್ನ ಅಣ್ಣನ ಮಗ, ಚಾಸಾ.2 ನನ್ನ ದೊಡ್ಡಪ್ಪನ ಮಗ. ಚಾಸಾ.4 ಮತ್ತು 5 ಗೊತ್ತು. ಚಾಸಾ.6 ರವರು ಚಾಸಾ.2 ರವರ ಹೆಂಡತಿ. ಚಾಸಾ.7 ನನ್ನ ಸಂಬಂಧಿ. ಆರೋಪಿಗಳು ಗೊತ್ತು. ಆರೋಪಿಗಳು, ಮಂಡ್ಯದಲ್ಲಿ ಇರುವ ಮರಿಗೌಡ ಬಡಾವಣೆಯಲ್ಲಿ 3 ನೇ ಕ್ರಾಸ್ ನಲ್ಲಿ ವಾಸ ಇದ್ದಾರೆ. ಚಾಸಾ.1 ಮತ್ತು 2 ರವರು ಸಹಾ ಮರಿಗೌಡ ಬಡಾವಣೆಯಲ್ಲಿ ವಾಸವಿದ್ದಾರೆ. ಆರೋಪಿತರು ಮತ್ತು ಚಾಸಾ. 1 ಹಾಗೂ 2 ರವರು ಅಕ್ಕಪಕ್ಕದ ಮನೆಯಲ್ಲಿ ವಾಸ ಇದ್ದಾರೆ ಹಾಗೂ ಇಬ್ಬರ ಮನೆಯ ನಡುವೆ ಒಂದೇ ಗೋಡೆ ಇರುತ್ತದೆ. ದಿನಾಂಕ 30.09.2020 ಬೆಳಗ್ಗೆ 9.00 ಅಥವಾ 9.30 ಗಂಟೆ ಸಮಯದಲ್ಲಿ ಚಾಸಾ.2 ರವರ ಮನೆ ಹತ್ತಿರ ಜಗಳವಾಗಿತ್ತು. ನಾನು ಸರ್ಕಾರಿ ಆಸ್ಪತ್ರೆಯ ಹತ್ತಿರ ಇದ್ದೆ . ಕಚ್ಚಾಡುತ್ತಿದ್ದರು ಶಬ್ದ ಕೇಳಿಸಿತು, ನಾನು ಸ್ಥಳಕ್ಕೆ ಹೋದೆ. ಚಾಸಾ.2 ಮತ್ತು ಆರೋಪಿಗಳಿಗೂ ಜಗಳವಾಗುತ್ತಿತ್ತು. ಚಾಸಾ.1 ರವರು ಸಹಾ ಅಲ್ಲಿ ಇದ್ದರು. ಆಸ್ತಿ ವಿಚಾರಕ್ಕೆ ಕಚ್ಚಾಡುತ್ತಿದ್ದರು. ಜಗಳದಲ್ಲಿ ಚಾಸಾ.2 ರವರ ತಲೆಗೆ ಮತ್ತು ಕಿವಿಯ ಹತ್ತಿರ ಏಟಾಗಿ ವಿಪರೀತ ಗಾಯಗಳಾಗಿತ್ತು. ಚಾಸಾ.2 ರವರ ತಲೆಗೆ ಮತ್ತು ಕಿವಿಗೆ ಸೈಜು ಗಲ್ಲು (ಡಿಂಡುಗಲ್ಲು) ನಿಂದ ಏಟಾಗಿತ್ತು. 2 ನೇ ಆರೋಪಿ ಶ್ರೀನಿಧಿ ಮತ್ತು ಇನ್ನೊಬ್ಬರು ಕಲ್ಲನ್ನು ಎತ್ತಿ ಹಾಕುತ್ತಿದ್ದರು. ಮನೆಯ

ಮೇಲಿಂದ ಕಲ್ಲನ್ನು ಹಾಕಿದ್ದರು. ಚಾಸಾ.2 ರವರ ಮನೆಯ ಮೇಲಿಂದ ಕಲ್ಲನ್ನು ಹಾಕಿದ್ದರು. 2 ನೇ ಆರೋಪಿ ಶ್ರೀನಿಧಿ ಮತ್ತು ಇನ್ನೊಬ್ಬರು ಕಲ್ಲನ್ನು ಎತ್ತಿ ಹಾಕಿದರು. ಇನ್ನೊಬ್ಬ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿವಸ 1 ನೇ ಆರೋಪಿ ಶಂಕರ, ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಅವರ ವಕೀಲರು ಸಲ್ಲಿಸಿದ ವಿನಾಯಿತಿ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿರುತ್ತದೆ).

(ಈ ಹಂತದಲ್ಲಿ , 1 ನೇ ಆರೋಪಿಯ ಹಾಜರಾತಿ ನ್ಯಾಯಾಲಯದ ಮುಂದೆ ಅವಶ್ಯಕತೆ ಇರುವುದರಿಂದ ಹಾಗೂ ಸದರಿ ಸಾಕ್ಷಿಯು ಆತನನ್ನು ನೋಡಿ ಗುರುತಿಸಬೇಕಾಗಿರುವುದರಿಂದ, 1 ನೇ ಆರೋಪಿ ಗೈರು ಹಾಜರಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 20.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಈ ಹಿಂದೆ ಈ ನ್ಯಾಯಾಲಯದಲ್ಲಿ ದಿನಾಂಕ 04.07.2022 ರಂದು, 2 ನೇ ಆರೋಪಿ ಶ್ರೀ ನಿಧಿ ಮತ್ತು ಇನ್ನೊಬ್ಬರು ಕಲ್ಲನ್ನು ಎತ್ತಿ ಹಾಕಿದರು ಹಾಗೂ ಆ ಇನ್ನೊಬ್ಬ ವ್ಯಕ್ತಿಯನ್ನು ನೋಡಿದರೆ ಗುರುತಿಸುವುದಾಗಿ ಹೇಳಿರುತ್ತೇನೆ. ಆ ದಿವಸ ಅಂದರೆ ದಿನಾಂಕ 04.07.2022 ರಂದು ಆ ಇನ್ನೊಬ್ಬ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಈ ದಿವಸ ನಾನು ಆ ಇನ್ನೊಬ್ಬ

ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವ್ಯಕ್ತಿಯು ಈ ದಿವಸ ನ್ಯಾಯಾಲಯದ ಮುಂದೆ ಹಾಜರಾಗಿದ್ದು ಸಾಕ್ಷಿಯು 1 ನೇ ಆರೋಪಿಯಾದ ಶಂಕರ್ ರವರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಅಲ್ಲದೆ , ಕೆಳಗಡೆ ಈಗ ನ್ಯಾಯಾಲಯದ ಮುಂದಿರುವ 2, 4 , 5 , 6 ಮತ್ತು 7 ಆರೋಪಿತರು ಇದ್ದರು. ಹೆಂಗಸರ ಆರೋಪಿಗಳ ಕೈಯಲ್ಲಿ ಕುಡುಗೋಲು ಇತ್ತು. 2 ನೇ ಆರೋಪಿಯಾದ ಶ್ರೀನಿಧಿ ಕೈಯಲ್ಲಿ ದೊಣ್ಣೆ ಇತ್ತು. 2 ನೇ ಆರೋಪಿಯಾದ ಶ್ರೀನಿಧಿ ಮತ್ತು ನ್ಯಾಯಾಲಯದ ಮುಂದಿರುವ ಎಲ್ಲಾ ಹೆಂಗಸರು ಆರೋಪಿಗಳು ಚಾಸಾ.2 ರವರಿಗೆ ದೊಣ್ಣೆಯಿಂದ ತಲೆಗೆ ಹೊಡೆದರು. ಚಾಸಾ.2 ರವರ ತಲೆಗೆ, ಮುಖಕ್ಕೆ ಮತ್ತು ಹಣೆಗೆ ಗಾಯಗಳಾಯಿತು. ಚಾಸಾ.2 ರವರ ಮಗ ಚಾಸಾ.1 ರವರಿಗೂ ಸಹಾ ಏಟಾಯಿತು. ದೊಣ್ಣೆಯಿಂದ ಚಾಸಾ.1 ರವರ ಕೈಗಳಿಗೆ ಮತ್ತು ಎಡಕಿವಿಗೆ ಹೊಡೆದು ಗಾಯ ಮಾಡಿದರು. 1 ನೇ ಆರೋಪಿ ಶಂಕರ ಮೇಲಿನಿಂದ ಕೆಳಗೆ ಇಳಿದು ಬಂದರು ಹಾಗೂ ದೊಣ್ಣೆಯಿಂದ ಚಾಸಾ.2 ರವರಿಗೆ ಹೊಡೆದರು. 1 ಮತ್ತು 2 ನೇ ಆರೋಪಿಗಳು ಹಾಗೂ 4, 5 ಮತ್ತು 7 ನೇ ಆರೋಪಿಗಳ ಕೈಯಲ್ಲಿ ಕುಡುಗೋಲು ಇತ್ತು. 6 ನೇ ಆರೋಪಿ ಪುಟ್ಟೀರಮ್ಮ, ಚಾಸಾ.2 ಸ್ವಾಮಿ ಕೆಳಗೆ ಬಿದಿದ್ದಾಗ ಒದ್ದಿ ಬೈಯುತ್ತಿದ್ದರು. 10 ರಿಂದ 15 ನಿಮಿಷ ಗಲಾಟೆ ನಡೆಯಿತು. ಚಾಸಾ.4 ಮತ್ತು 5 ಸಹಾ ಇದ್ದರು. ನಾನಾಗಲಿ ಬೇರೆಯವರಾಗಲಿ ಬಿಡಿಸಲು ಪ್ರಯತ್ನಿಸಲಿಲ್ಲ. ಗಾಯಾಳಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆರೋಪಿತರು ಹೊರಟು ಹೋದರು. ಆರೋಪಿತರು ಏನು ಹೇಳಿಕೊಂಡು ಹೋದರು ಅಂತ ನನಗೆ ಗೊತ್ತಿಲ್ಲ. ಗಾಯಾಳುಗಳನ್ನು ಮಂಡ್ಯದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಮದ್ಯಾಹ್ನ ಪೊಲೀಸರು ಮಹಜರ್ ಮಾಡಲು ಬಂದಿದ್ದರು. ಪೊಲೀಸರು ಮಹಜರ್ ಗೆ ಬಂದಿದ್ದಾಗ ಮದ್ಯಾಹ್ನ 2.30 ಗಂಟೆ ಆಗಿರಬಹುದು. ಪೊಲೀಸರು 2 ದೊಣ್ಣೆ, 3 ಕುಡುಲುಗಳು ಮತ್ತು ಒಂದು ಸೈಜ್ ಕಲ್ಲನ್ನು ತೆಗೆದುಕೊಂಡರು . ವಸ್ತುಗಳು, ಚಾಸಾ 2 ರವರ ಮನೆಯ ಮುಂಭಾಗದಲ್ಲಿ ಇತ್ತು. ನಾನು, ಚಾಸಾ.1 ಮತ್ತು ಅವರ ಸ್ನೇಹಿತ ಪೊಲೀಸರಿಗೆ ಜಾಗವನ್ನು ತೋರಿಸಿದೆವು. ಹಲ್ಲೆಗೆ ಉಪಯೋಗಿಸಿದ ದೊಣ್ಣೆಗಳು , ಕುಡುಗೋಲು ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು.ಮಾ.6 ಒಂದು ದಿಂಡುಗಲ್ಲನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು ಮು.ಮಾ.2 ದೊಣ್ಣೆಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 3 ,ಮು.ಮಾ.3 ರಿಂದ 5, ಕುಡುಗೋಲನ್ನು ನೋಡಿ ಗುರುತಿಸಿರತ್ತಾರೆ. ಪೊಲೀಸರು ಇವುಗಳನ್ನು ವಶಪಡಿಸಿಕೊಂಡು ಮಹಜರನ್ನು ಬರೆದುಕೊಂಡರು.ನಿಪಿ.2 ರಲ್ಲಿ ನನ್ನ ಸಹಿ ಇದ್ದು

ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಾನು ಚಾಸಾ.1 ಮತ್ತು ಆತನ ಸ್ನೇಹಿತ ನಿಪಿ.2 ಮಹಜರ್ ಗೆ ಸಹಿ ಮಾಡಿದೆವು. ನನಗೆ ತೋರಿಸಿದ ನಿಪಿ.3 ಮತ್ತು 4 ಫೋಟೋದಲ್ಲಿ ಚಾಸಾ.2 ರವರ ಮನೆಯ ಮುಂಭಾಗದಲ್ಲಿ 2 ಸೈಜುಗಲ್ಲು ಇರುವುದು ಕಂಡು ಬರುತ್ತದೆ. ನಿಪಿ.5 ಮತ್ತು 6 ಫೋಟೋದಲ್ಲಿ ನಾನು, ಚಾಸಾ.1, ಆತನ ಸ್ನೇಹಿತ ಮತ್ತು ಪೊಲೀಸರು ಇದ್ದೇವೆ. ಸದರಿ ಫೋಟೋಗಳಲ್ಲಿ ಚಾಸಾ.1 ಪೊಲೀಸರಿಗೆ ಕುಡುಗೋಲನ್ನು ತೋರಿಸುತ್ತಿದ್ದಾರೆ. ನಿಪಿ.7 ಫೋಟೋದಲ್ಲಿ ಚಾಸಾ.1 ಪೊಲೀಸರಿಗೆ ಕುಡುಗೋಲನ್ನು ತೋರಿಸುತ್ತಿದ್ದಾರೆ ಹಾಗೂ ನಿಪಿ.7 ಫೋಟೋದಲ್ಲಿ ದೊಣ್ಣೆಯನ್ನು ತೋರಿಸುತ್ತಿದ್ದಾರೆ. ನಿಪಿ.9 ಫೋಟೋದಲ್ಲಿ ನಾನು ಚಾಸಾ.1 ಮತ್ತು ಆತನ ಸ್ನೇಹಿತ ಇದ್ದೇವೆ ಹಾಗೂ ಚಾಸಾ.1 ರವರು ಕುಡುಗೋಲನ್ನು ಕೊಡುತ್ತಿದ್ದಾರೆ ಹಾಗೂ ನಿಪಿ.10 ಫೋಟೋದಲ್ಲಿ ನಾನು ಚಾಸಾ.1 ಮತ್ತು ಆತನ ಸ್ನೇಹಿತ ಇದ್ದೇವೆ ಹಾಗೂ ಚಾಸಾ.1 ರವರು ದೊಣ್ಣೆಯನ್ನು ಕೊಡುತ್ತಿದ್ದಾರೆ. ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ರುಜು ಇರುತ್ತದೆ. ಸದರಿ ಮಹಜರನ್ನು ನಿಪಿ.19 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಸದರಿ ರುಜುವನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸರು ರಾತ್ರಿ ಠಾಣೆಗೆ ನನ್ನನ್ನು ಕರೆಸಿದ್ದರು ಹಾಗೂ ಗಲಾಟೆಯಾದಾಗ 2 ನೇ ಆರೋಪಿ ಶ್ರೀ ನಿಧಿ ಧರಿಸಿದ್ದ ನೀಲಿ ಬಣ್ಣದ ನೈಟ್ ಪ್ಯಾಂಟನ್ನು ತೆಗೆದಕೊಂಡರು. 2 ನೇ ಆರೋಪಿ ಶ್ರೀನಿಧಿ , ಪ್ಯಾಂಟನ್ನು ಪೊಲೀಸರಿಗೆ ಕೊಟ್ಟಿದ್ದನು. ಸದರಿ ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.12 ನೀಲಿ ಪ್ಯಾಂಟನ್ನು ನೋಡಿ ಗುರುತಿಸುತ್ತಾರೆ ಹಾಗೂ ಅದರ ಮೇಲೆ ಅಂಟಿಸಿರುವ ಪಂಚರ ಸಹಿ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ , ನಾನು , ಚಾಸಾ.1 ರವರ ಸ್ನೇಹಿತ ಮತ್ತು 2 ನೇ ಆರೋಪಿ ಶ್ರೀ ನಿಧಿ ಇದ್ದೇವೆ. ಈ 4 ಫೋಟೋಗಳ ಪೈಕಿ 2 ಫೋಟೋದಲ್ಲಿ 2 ನೇ ಆರೋಪಿ ಶ್ರೀನಿಧಿ ನೀಲಿ ಪ್ಯಾಂಟನ್ನು ಹಿಡಿದುಕೊಂಡಿದ್ದಾರೆ ಹಾಗೂ 1 ಫೋಟೋದಲ್ಲಿ ನೀಲಿ ಪ್ಯಾಂಟನ್ನು ಪೊಲೀಸರಿಗೆ ಕೊಡುತ್ತಿದ್ದಾರೆ. ಸದರಿ ಫೋಟೋಗಳನ್ನು ನಿಶಾನೆಗೆ ಗುರುಪಡಿಸಲು ಆರೋಪಿಯ ಪರ ವಕೀಲರು ಆಕ್ಷೇಪಣೆ ಮಾಡಿರುತ್ತಾರೆ ಕಾರಣ ಸದರಿ ಪ್ರಕರಣದ ಕಡತದಲ್ಲಿ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಢೀಕರಿಸಿರುವ ದೃಢಿಕರಣ ಪತ್ರ ಲಭ್ಯವಿಲ್ಲದೆ ಇರುವುದರಿಂದ . ಆದ್ದರಿಂದ ಸದರಿ 4 ಫೋಟೋಗಳನ್ನು ನಿಶಾನೆಗೆ ಗುರುಪಡಿಸಿರುವುದಿಲ್ಲ. ಸದರಿ ಮೇಲೆ ಹೇಳಿದ 4 ಫೋಟೋಗಳಲ್ಲಿ ಕಾಣುತ್ತಿರುವ ನೀಲಿ ಪ್ಯಾಂಟು ಈಗ ನ್ಯಾಯಾಲಯದ ಮುಂದಿರುವ ಮು.ಮಾ.12 ಆಗಿರುತ್ತದೆ ಎಂದು ಸಾಕ್ಷಿ ನೀಲಿ ಪ್ಯಾಂಟನ್ನು ನೋಡಿ ಗುರುತಿಸಿರುತ್ತಾರೆ.

ನನಗೆ ತೋರಿಸಿದ ಇನ್ನೊಂದು ಮಹಜರ್ ನಲ್ಲಿ ನನ್ನ ರುಜು ಇರುತ್ತದೆ. ಸದರಿ ಮಹಜರನ್ನು ನಿಪಿ.20 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಸದರಿ ರುಜುವನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಗಲಾಟೆ ಆಗಿ 7-8 ದಿವಸಗಳ ಮೇಲೆ ಈ ರುಜುವನ್ನು ಪೊಲೀಸ್ ಠಾಣೆಯಲ್ಲಿ , ಪೊಲೀಸರು 1 ನೇ ಆರೋಪಿ ಶಂಕರನು ಕರೆದುಕೊಂಡು ಬಂದಿದ್ದ ಸಂದರ್ಬದಲ್ಲಿ ಮಾಡಿರುತ್ತೇನೆ. 1 ನೇ ಆರೋಪಿಯ ಪ್ಯಾಂಟನ್ನು ತೆಗೆದುಕೊಂಡು ಪೊಲೀಸರು ಫೋಟೋ ತೆಗೆದುಕೊಂಡರು. 1 ನೇ ಆರೋಪಿ ಶಂಕರ ಗಲಾಟೆ ಸಮಯದಲ್ಲಿ ಆ ಪ್ಯಾಂಟನ್ನು ದರಿಸಿದ್ದರಿಂದ ಪೊಲೀಸರು ಅದನ್ನು ತೆಗೆದುಕೊಂಡಿದ್ದರು. ಸದರಿ ಪ್ಯಾಂಟಿನ ಬಣ್ಣ ಸಿಮೆಂಟ್ ಬಣ್ಣದಾಗಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ರಕ್ತದ ಕಲೆ ಇರುವ ಸಿಮೆಂಟ್ ಬಣ್ಣದ ಪ್ಯಾಂಟನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.14 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಹಿಯನ್ನು ತೆಗೆದುಕೊಂಡು ಫೋಟೋವನ್ನು ತೆಗೆಸಿಕೊಂಡರು. ಮು.ಮಾ.14 ಕ್ಕೆ ಪಂಚರ ಚೀಟಿಯನ್ನು ಅಂಟಿಸಲಾಯಿತು. ಸದರಿ ಪಂಚರ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ ನಾನು, ಚಾಸಾ.1 ರವರ ಸ್ನೇಹಿತ, ಶಂಕರ್ ಮತ್ತು ಪೊಲೀಸರು ಇದ್ದೇವೆ. 4 ಫೋಟೋಗಳ ಪೈಕಿ 2 ಫೋಟೋಗಳಲ್ಲಿ ಸಿಮೆಂಟ್ ಕಲರ್ ಪ್ಯಾಂಟ್ ಕಾಣಿಸುತ್ತಿದೆ. ಸದರಿ 4 ಫೋಟೋಗಳನ್ನು ಆರೋಪಿಯ ಪರ ವಕೀಲರು, ಸದರಿ ಪ್ರಕರಣದ ಕಡತದಲ್ಲಿ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಢೀಕರಿಸಿರುವ ದೃಢಿಕರಣ ಪತ್ರ ಲಭ್ಯವಿಲ್ಲದೆ ಇರುವುದರಿಂದ ನಿಶಾನೆಗೆ ಗುರುಪಡಿಸಲು ಆಕ್ಷೇಪಣೆ ಮಾಡಿರುತ್ತಾರೆ , ಆದ್ದರಿಂದ ನಿಶಾನೆಗೆ ಗುರಿಪಡಿಸಿರುವುದಿಲ್ಲ. ಮೇಲೆ ಹೇಳಿದ ಫೋಟೋಗಳಲ್ಲಿ ಕಾಣಿಸಿರುವ ಮು.ಮಾ.14 ಪ್ಯಾಂಟು ಈಗ ನ್ಯಾಯಾಲಯದ ಮುಂದೆ ಇರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಆಸ್ತಿ ವಿಚಾರದಲ್ಲಿ , ಚಾಸಾ.2 ಮತ್ತು ಆರೋಪಿತರ ನಡುವೆ ಗಲಾಟೆ ಆಗಿತ್ತು ಎಂಬ ವಿಚಾರ ತಿಳಿಯಿತು. ಪೊಲೀಸರಿಗೆ ಘಟನೆ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಬಿ.ಆರ್.ವಿ.ವಕೀಲರು ಸಮಯವನ್ನು ಕೋರಿರುತ್ತಾರೆ, ಕಾರಣ ಫ್ರಾಸಾ.1 ಮತ್ತು ಫ್ರಾಸಾ.2 ರವರ ಪಾಟೀಸವಾಲವನ್ನು ಈ ಹಿಂದೆ ಆರೋಪಿಗಳ ಹಾಜರಾಗುತ್ತಿದ್ದ ವಕೀಲರು ಮಾಡಿಲ್ಲದೆ ಇರುವುದರಿಂದ, ಫ್ರಾಸಾ.1 ಮತ್ತು ಫ್ರಾಸಾ.2 ರವರನ್ನು ನ್ಯಾಯಾಲಯಕ್ಕೆ ಪುನಃ ಕರೆಯಿಸಿ ಅವರ ಪಾಟೀ ಸವಾಲನ್ನು ಮಾಡಬೇಕಾಗಿರುವುದರಿಂದ ಹಾಗೂ ಫ್ರಾಸಾ.1, ಫ್ರಾಸಾ.2 ಮತ್ತು ಫ್ರಾಸಾ.4 ರವರು

ಸಂಬಂಧಿಗಳು ಆಗಿರುವುದರಿಂದ, ನ್ಯಾಯಾಲಯದ ಹಿತ ದೃಷ್ಟಿಯಿಂದ ಫ್ರಾಸಾ.1, ಫ್ರಾಸಾ.2 ಮತ್ತು ಫ್ರಾಸಾ.4 ರವರನ್ನು ಒಂದೇ ದಿವಸ ಪಾಟೀ ಸವಾಲು ಮಾಡಬೇಕಾಗಿರುವುದರಿಂದ ಸಮಯವನ್ನು ಕೋರಿರುತ್ತಾರೆ. ಸಮಯವನ್ನು ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 20.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ</u>

ಭಾಗ್ಯ ಮತ್ತು ಲಕ್ಷ್ಮಿ ನನಗೆ ದೂರದ ಸಂಬಂಧಿಕರು. ಪುಟ್ಟೀರಮ್ಮ ನನ್ನ ಸಂಬಂಧಿಕರು. ಚಾಸಾ.2 ಸ್ವಾಮಿ ನನ್ನ ದೊಡ್ಡಪ್ಪನ ಮಗ. ನನ್ನ ದೊಡ್ಡಪ್ಪನ ಹೆಸರು ಗೊತ್ತಿಲ್ಲ. ನನ್ನ ತಂದೆ ಹಾಗೂ ಚಾಸಾ.2 ರವರ ತಂದೆ ಅಣ್ಣ ತಮ್ಮಂದಿರಲ್ಲ. ಚಾಸಾ.2 ಮಿಕ್ಕೆರೆಯಲ್ಲಿ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮನೆ ಮರಿಗೌಡ ಬಡಾವಣೆಯ 3 ನೇ ಕ್ರಾಸ್ ನಲ್ಲಿ ಇದೆ. ನಮ್ಮ ಮನೆಯಿಂದ ಆರೋಪಿತರ ಮನೆಗೆ ಅಂದಾಜು 40 ರಿಂದ 50 ಅಡಿ ಆಗಬಹುದು. ಮರಿಗೌಡ ಬಡಾವಣೆಯಲ್ಲಿ ಇರುವ ಸರ್ಕಾರಿ ಆಸ್ಪತ್ರೆಯಿಂದ ಆರೋಪಿತರ ಮನೆಗೆ ಅಂದಾಜು 250 ಮೀಟರ್ ಆಗಬಹುದು. ನಮ್ಮ ಮನೆ ಮತ್ತು ಆರೋಪಿತರ ಮನೆಯಿಂದ ಸರ್ಕಾರಿ ಆಸ್ಪತ್ರೆ ನಡುವೆ 7-8 ಮನೆಗಳು ಇವೆ. ನನ್ನ

ಜೊತೆಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ.4 ಶರತ್ ಮತ್ತು ಚಾಸಾ.5 ಜಯಣ್ಣ ಇದ್ದರು. ಆರೋಪಿತರ ಮನೆ ಹತ್ತಿರ 7-8 ಜನರು ನಿಂತಿದ್ದರಿಂದ, ಏಕೆ ಗುಂಪು ಕಟ್ಟಿದ್ದಾರೆ ಅಂತ ನಾನು ಆಸ್ಪತ್ರೆಯಿಂದ ಆರೋಪಿತರ ಮನೆ ಹತ್ತಿರ ಹೋದೆನು. ಆಸ್ಪತ್ರೆ ಪಕ್ಕದಲ್ಲಿ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳು ಇವೆ. ಆರೋಪಿತರ ಮನೆ ಹತ್ತಿರ 7-8 ಜನರು ನಿಂತಿದ್ದು, ನಾನು ನಿಂತಿದ್ದ ಆಸ್ಪತ್ರೆ ಬಳಿ ಇದ್ದ ರಸ್ತೆಯಿಂದ ಕಾಣಿಸುತ್ತಿತ್ತು. ಆರೋಪಿತರ ಮನೆ ರಸ್ತೆಯ ಮಗ್ಗಲಲ್ಲ ಇತ್ತು. ಆರೋಪಿತರ ಮನೆಯಿಂದ ಆಚೆ ಬಂದರೆ ಎರಡು ಹೆಜ್ಜೆ ಇಟ್ಟರೆ ರಸ್ತೆ ಸಿಗುತ್ತದೆ. ನಾನು ಹೋಗಿ ನೋಡಿದಾಗ ಚಾಸಾ.2 ಸ್ವಾಮಿ ಅವರ ಮನೆಯ ಮುಂಭಾಗದ ಜಾಗದಲ್ಲಿ ಕೆಳಗೆ ಬಿದಿದ್ದರು. ಚಾಸಾ.2, ಅವರ ಮನೆ ಮತ್ತು ರಸ್ತೆಯ ಮಧ್ಯ ಇದ್ದ ಎರಡು ಹೆಜ್ಜೆಯ ಜಾಗದಲ್ಲಿ ಬಿದಿದ್ದರು. ಚಾಸಾ.2 ರವರ ತಲೆಗೆ ಮೇಲಿಂದ ಕಲ್ಲನ್ನು ಎತ್ತಿ ಹಾಕಿದ್ದರು, ಅವರಿಗೆ ರಕ್ತ ಬರುತ್ತಿತ್ತು. ಚಾಸಾ.2 ರವರನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಚಾಸಾ.2 ರವರ ತಲೆಯಿಂದ ರಕ್ತ ಸೋರುತ್ತಿತ್ತು. ಚಾಸಾ.2 ರವರನ್ನು ಆಸ್ಪತ್ರೆಗೆ ನನ್ನ ಆಟೋದಲ್ಲಿ ಕರೆದುಕೊಂಡು ಹೋದೆನು. ಚಾಸಾ.2 ಸ್ವಾಮಿರವರನ್ನು, ನಾನು ಮತ್ತು ಚಾಸಾ.1 ತಿರುಮಲ ಆಟೋಗೆ ಎತ್ತಿ ಹಾಕಿದೆವು. ನನ್ನ ಜೊತೆ ಆಸ್ಪತ್ರೆಗೆ ಆಟೋದಲ್ಲಿ ಚಾಸಾ.1 ತಿರುಮಲ ಮತ್ತು ಚಾಸಾ.2 ಸ್ವಾಮಿ ಮಾತ್ರ ಇದ್ದರು. ನಾನು, ಚಾಸಾ.2 ಸ್ವಾಮಿಯನ್ನು ಎತ್ತಿ ಆಟೋಗೆ ಹಾಕುವಾಗ ನನ್ನ ಬಟ್ಟೆಗೆ ರಕ್ತವಾಗಿತ್ತು. ನಮ್ಮ ಮರಿಗೌಡ ಬಡಾವಣೆಯಲ್ಲಿ ಇದ್ದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಾಸಾ.2 ರವರನ್ನು ಕರೆದುಕೊಂಡು ಹೋಗಲಿಲ್ಲ. ಚಾಸಾ.1 ತಿರುಮಲ ರವರ ಕೈಗೆ, ಕಿವಿಗೆ ಪೆಟ್ಟಾಗಿತ್ತು ಮತ್ತು ಕೈ ಊತಗೊಂಡಿತ್ತು.

ಮರಿಗೌಡ ಬಡಾವಣೆಯ ಆರೋಪಿತರ ಮನೆಯಿಂದ , ಮಂಡ್ಯದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ 3 ಕಿ.ಮಿ ದೂರ ಆಗುತ್ತದೆ. ನನ್ನ ಬಳಿ ಮೊಬೈಲ್ ಫೋನ್ ಇತ್ತು. ಪೊಲೀಸರಿಗೆ ನಾನು ಫೋನ್ ಮಾಡಿ ವಿಷಯವನ್ನು ತಿಳಿಸಲಿಲ್ಲ. ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋಗುವುದಕ್ಕಿಂತ ಮುಂಚೆ ಪಶ್ಚಿಮ ಪೊಲೀಸ್ ಠಾಣೆ ಸಿಗುತ್ತದೆ ಎಂದರೆ ಸರಿಯಲ್ಲ. ಮರಿಗೌಡ ಬಡಾವಣೆಯಿಂದ ಮಂಡ್ಯ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಹೋಗುವುದಕ್ಕಿಂತ ಮುಂಚೆ ಪಶ್ಚಿಮ ಪೊಲೀಸ್ ಠಾಣೆ ಸಿಗುತ್ತದೆ ಎಂದರೆ ಸರಿಯಲ್ಲ. ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋದ ಮೇಲೆ ನನಾಗಲೀ, ಚಾಸಾ.1 ರವರಾಗಲೀ ಪೊಲೀಸರಿಗೆ ವಿಷಯವನ್ನು ತಿಳಿಸಲಿಲ್ಲ. ಆಸ್ಪತ್ರೆಯಲ್ಲಿ ನಾನು 5 ರಿಂದ 10 ನಿಮಿಷ ಇದ್ದೆನು. ನಂತರ ನಾನು ಮನೆಗೆ ಹೋದೆನು. ಆಸ್ಪತ್ರೆಯಿಂದ ಮನೆಗೆ ಹೋಗುವುದಕ್ಕಿಂತ ಮುಂಚೆ ಪೊಲೀಸ್ ಠಾಣೆಗೆ ದೂರನ್ನು ಕೊಡಲಿಲ್ಲ. ಜಿಲ್ಲಾ ಆಸ್ಪತ್ರೆಯನ್ನು ಬಿಡುವಾಗ ಬೆಳಗ್ಗೆ 9.50 ಅಥವಾ 9.55 ಅಂದರೆ 10 ಗಂಟೆ ಒಳಗೆ ಆಗಿತ್ತು. ಪೊಲೀಸರು ಮತ್ತೆ ನನಗೆ ಮಹಜರ್ ಮಾಡುವುದಕ್ಕೆ ಬರಲು ಹೇಳಿದರು, ಆಗ ನಾನು ಮನೆಯಲ್ಲಿ ಇದ್ದೆನು. ಮಹಜರ್ ಗೆ ಬರುವಂತೆ ನನ್ನನ್ನು ಬರಲು ಕರೆದಿದ್ದ ಪೊಲೀಸರ ಹೆಸರು ಗೊತ್ತಿಲ್ಲ. ನನ್ನನ್ನು ಮಹಜರ್ ಗೆ ಬರುವಂತೆ ಕರೆದಿದ್ದಾಗ ಸಮಯ ಮದ್ಯಾಹ್ನ 2.00 ರಿಂದ

2.30 ಗಂಟೆ ಆಗಿತ್ತು. ನಾನು ಮಹಜರ್ ಗೆ ಸಹಿ ಹಾಕಿದಾಗ ಮದ್ಯಾಹ್ನ 3.00 ರಿಂದ 3.15 ಗಂಟೆ ಆಗಿತ್ತು . ರಕ್ತ ಸಿಕ್ತ ಆಗಿದ್ದ ನನ್ನ ಬಟ್ಟೆಯನ್ನು ಕೊಡುವಂತೆ ಪೊಲೀಸರು ನನ್ನನ್ನು ಕೇಳಿರಲಿಲ್ಲ. ಆ ಸಮಯದಲ್ಲಿ ನಾನು ಪೊಲೀಸರಿಗೆ, ಗಾಯವಾಗಿದ್ದ ಚಾಸಾ.2 ಸ್ವಾಮಿಯನ್ನು ಆಟೋಗೆ ಎತ್ತಿ ಹಾಕಿಕೊಂಡು ಆಸ್ಪತ್ರೆಗೆ ಸೇರಿಸಿದೆನು ಅಂತ ಹೇಳಿದೆನು. ಆಟೋ ಓಡಿಸುವುದಕ್ಕೆ ನನಗೆ ಲೈಸೆನ್ಸ್ ಇದೆ. ಪೊಲೀಸರು ನನ್ನ ಆಟೋ ಲೈಸೆನ್ಸ್ ಅನ್ನು ಕೇಳಿ ತೆಗೆದುಕೊಂಡಿರಲಿಲ್ಲ. ಚಾಸಾ.2 ರವರನ್ನು ಆಟೋದಲ್ಲಿ ಕರೆದುಕೊಂಡು ಹೋಗುವಾಗ ಆಟೂದಲ್ಲಿ ರಕ್ತವಾಗಿತ್ತು. ಪೊಲೀಸರು ಸದರಿ ಆಟೋವನ್ನು ಪರಿಶೀಲನೆ ಮಾಡಲಿಲ್ಲ. ಸದರಿ ಆಟೋ ನಂಬರ್ ಕೆಎ-01-3831 . ಸದರಿ ಆಟೋ ನನ್ನ ಸ್ವಂತದ್ದು . ಸದರಿ ಆಟೋವನ್ನು ಓಡಿಸುವುದಕ್ಕೆ ಪರವಾನಗಿ ಬೆಂಗಳೂರಿನಲ್ಲಿ ಇದೆ , ಮಂಡ್ಯಕ್ಕೆ ಅಲ್ಲ ಎಂದರೆ ಸರಿ. ನಾನು ಆಟೋ ಓಡಿಸಿಕೊಂಡು ಬೆಂಗಳೂರು ನಗರದಲ್ಲಿ ಇದ್ದೆನು ಹಾಗೂ ಮಂಡ್ಯದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ತೀರಿಕೊಂಡಿದ್ದರಿಂದ ನಾನು ಮಂಡ್ಯಕ್ಕೆ ಬಂದಿದ್ದೆ ಎಂದು ಹೇಳುತ್ತಾರೆ. ನನ್ನ ತಾಯಿ ತೀರಿಕೊಂಡಿದ್ದ ದಿನಾಂಕ 22.09.2020 . ಬೆಂಗಳೂರು ನಗರದಿಂದ ಮಂಡ್ಯಕ್ಕೆ ನಾನು ಆಟೋವನ್ನು ತರುವಂತೆ ಇಲ್ಲ ಎಂದರೆ ಸರಿ. ಮಂಡ್ಯದಲ್ಲಿ ಆಟೋವನ್ನು ನಾನು ಬಾಡಿಗೆಗೆ ಓಡಿಸುತ್ತಿರಲಿಲ್ಲ ಎಂದರೆ ಸರಿ. ನಾನು ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರಿಗೆ ಗಾಯಗಳಾಗಿ ಕೆಳಗೆ ಬಿದಿದ್ದರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.2 ರವರನ್ನು ಆಸ್ಪತ್ರೆಗೆ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ.

ಇದೆಲ್ಲಾ ಆದ ನಂತರ ಪೊಲೀಸರು ಮತ್ತೆ ನನ್ನನ್ನು ಅದೇ ದಿವಸ ಅಂದರೆ 30 ನೇ ತಾರೀಖು ನನಗೆ ಫೋನ್ ಮಾಡಿ ಠಾಣೆಗೆ ಕರೆಸಿಕೊಂಡಿದ್ದರು. ಪೊಲೀಸರು ನನಗೆ ಫೋನ್ ಮಾಡಿ ಕರೆದಾಗ ನಾನು ಮನೆಯಲ್ಲಿ ಇದ್ದೆನು. ಮಂಡ್ಯದ ಆರ್.ಪಿ. ರಸ್ತೆ ಆಟೋ ನಿಲ್ದಾಣ ನನಗೆ ಗೊತ್ತಿಲ್ಲ. ಇದಾದ ನಂತರ ಪೊಲೀಸರು ಮತ್ತೆ ನನ್ನನ್ನು ಮಾರನೆಯ ದಿವಸ ಠಾಣೆಗೆ ಕರೆಸಿದ್ದರು. ನನಗೆ ಫೋನ್ ಮಾಡಿದ್ದಾಗ ನಾನು ಮನೆಯಲ್ಲಿ ಇದ್ದೆನು. 2 ನೇ ಆರೋಪಿ ಶ್ರೀನಿಧಿ ಪೊಲೀಸ್ ಠಾಣೆಯ ಒಳಭಾಗದಿಂದ ನೀಲಿ ಕಲರ್ ನೈಟ್ ಪ್ಯಾಂಟನ್ನು ತಂದು ಕೊಟ್ಟಿದ್ದರು. ನಾನು ಠಾಣೆಗೆ ಹೋದಾಗ 2 ನೇ ಆರೋಪಿ ಶ್ರೀನಿಧಿ ಸೆಲ್ ಒಳಗೆ ಇದ್ದರು. 2 ನೇ ಆರೋಪಿ ಶ್ರೀನಿಧಿ ಸೆಲ್ ಒಳಗೆ ಇದ್ದಾಗ ಯಾವ ಬಟ್ಟೆಯನ್ನು ಧರಿಸಿಕೊಂಡಿದ್ದರು ಅಂತ ಗೊತ್ತಿಲ್ಲ. ಮಾರನೆಯ ದಿವಸ ಪೊಲೀಸರು ನನ್ನನ್ನು ಮದ್ಯಾಹ್ನ ಕರೆಸಿದ್ದರು. ಆ ಸಮಯದಲ್ಲಿ 1 ನೇ ಆರೋಪಿ ಶಂಕರ ಸೆಲ್ ಒಳಗಡೆ ಇದ್ದನು. 1 ನೇ ಆರೋಪಿ ಶಂಕರ ಪೊಲೀಸ್ ಠಾಣೆ ಒಳಭಾಗದಿಂದ ಬಟ್ಟೆಯನ್ನು ತಂದು ಕೊಟ್ಟಿದ್ದರು. 1 ನೇ ಆರೋಪಿ ಶಂಕರ ಸೆಲ್ ಒಳಗೆ ಇದ್ದಾಗ ಯಾವ ಬಣ್ಣದ ಬಟ್ಟೆಯನ್ನು ಹಾಕಿಕೊಂಡಿದ್ದರು ಹಾಗೂ ಯಾವ ಬಟ್ಟೆಯನ್ನು ಧರಿಸಿಕೊಂಡಿದ್ದರು ಅಂತ ಗೊತ್ತಿಲ್ಲ. 1 ನೇ ಆರೋಪಿ ಶಂಕರ ಮತ್ತು 2 ನೇ

ಆರೋಪಿ ಶ್ರೀನಿಧಿಯನ್ನು ಪೊಲೀಸರು ಎಷ್ಟು ಗಂಟೆಗೆ ದಸ್ತಗಿರಿ ಮಾಡಿದರು ಅಂತ ನನಗೆ ಹೇಳಲಿಲ್ಲ. ನನ್ನ ಎದುರುಗಡೆ ಪೊಲೀಸರು 1 ಮತ್ತು 2 ನೇ ಆರೋಪಿಯನ್ನು ವಿಚಾರಣೆ ಮಾಡಿ ಬರವಣಿಗೆಯನ್ನು ಮಾಡಿಕೊಳ್ಳಲಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು 1 ನೇ ಆರೋಪಿಯಿಂದ ಅಥವಾ 2 ನೇ ಆರೋಪಿಯಿಂದ ಯಾವುದೇ ಬಟ್ಟೆಯನ್ನು ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ವಶಪಡಿಸಿಕೊಂಡಿದ್ದ ಬಟ್ಟೆಯನ್ನು ಏನು ಮಾಡಿದರು ಅಂತ ಗೊತ್ತಿಲ್ಲ. ಘಟನೆಗೆ ಸಂಬಂಧಪಟ್ಟಂತೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ.2 ನನ್ನ ದೂರದ ಸಂಬಂಧಿ ಮತ್ತು ಸ್ನೇಹಿತನಾಗಿರುವುದರಿಂದ , ಆತನಿಗೆ ಸಹಾಯ ಮಾಡಲು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ಸ್ಥಳ ಮಹಜರ್ ಅನ್ನು ಮಾಡಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.